# ಮಹಿಳಾ ವಚನಕಾರ್ತಿಯರಲ್ಲಿ ವೈದಿಕ ವರ್ಣಾಶ್ರಮ ವ್ಯವಸ್ಥೆ ಮತ್ತು ಪಿತೃಪ್ರಧಾನ ಕುಟುಂಬ ಪದ್ಧತಿ : ಒಂದು ವಿಶ್ಲೇಷಣೆ

*ಮಂಜಪ್ಪ ಚಲವಾದಿ

**ಪ್ರವೇಶ**

೧೨ನೇ ಶತಮಾನದಲ್ಲಿದ್ದ ಸಾಮಾಜಿಕ ಅಸಮಾನತೆಯು ಬಹಳಷ್ಟಿತ್ತು. ಇದರ ಬಗೆಗೆ ಅನೇಕ ವಚನಕಾರರು ವಚನಗಳ ಮೂಲಕ ಮಾತನಾಡಿದ್ದುಂಟು. ವೈದಿಕ ವರ್ಣಾಶ್ರಮ ವ್ಯವಸ್ಥೆ ಮತ್ತು ಪಿತೃಪ್ರಧಾನ ಕುಟುಂಬ ಪದ್ಧತಿಗಳಿಂದಾಗಿ ಸಮಾಜದಲ್ಲಿ ಸ್ತ್ರೀಗೆ ಉಂಟಾಗಿದ್ದ ಅಸಮಾನತೆ ಶೋಷಣೆಗಳನ್ನು ಕಂಡ ಶರಣರು ಸ್ತ್ರೀ–ಪುರುಷ ಭೇದರಹಿತ ಉಭಯ ಪ್ರಧಾನ ಕುಟುಂಬ ಪದ್ದತಿಯನ್ನು ಅಸ್ತಿತ್ವಕ್ಕೆ ತರಲು ಪ್ರಯತ್ನಿಸಿದರು. ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಎರಡು ನೆಲೆಗಳಲ್ಲಿಯೂ ಆಕೆ ಸಮಾನ ಅವಕಾಶಗಳೊಂದಿಗೆ ಬಕುಕಲು ಅನುವು ಮಾಡಿಕೊಟ್ಟರು. ಇದನ್ನು ಅವರ ಬದುಕಿನ ಘಟನೆಗಳೂ ಬದುಕಿನ ಮೌಲ್ಯಗಳ ಅಭಿವ್ಯಕ್ತಿಯನ್ನು ಮುಖ್ಯ ಗುರಿಯನ್ನಾಗಿ ಇಟ್ಟುಕೊಂಡ ವಚನಗಳು ನಿಚ್ಚಳವಾಗಿ ನಿರ್ವಚಿಸುತ್ತವೆ. ಈ ಹಿನ್ನೆಲೆಯಲ್ಲಿ ವೈದಿಕ ವರ್ಣಾಶ್ರಮ ವ್ಯವಸ್ಥೆ ಮತ್ತು ಪಿತೃಪ್ರಧಾನ ಕುಟುಂಬ ಪದ್ಧತಿಗಳನ್ನು ವಚನಗಳ ಮೂಲಕ ಪ್ರಸ್ತುತಪಡಿಸುವುದು ಈ ಲೇಖನದ ಉದ್ದೇಶವಾಗಿದೆ.

ಹನ್ನೆರಡನೆಯ ಶತಮಾನಗಳಲ್ಲಿ ಸ್ತ್ರೀಯರು ಪಡೆದ ಪುರುಷ ಸಮಾನ ಅವಕಾಶಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಮುಖ್ಯವಾದುದು ಇದು ಶತಶತಮಾನಗಳಿಂದ ಸಾಹಿತ್ಯ ರಚನೆ ಕೇವಲ ಪುರುಷರ ಹಕ್ಕು ಎಂಬ ಸ್ಥಾಪಿತಕಲ್ಪನೆಯನ್ನು ಸುಳ್ಳಾಗಿಸಿತು ಈ ಕ್ಷೇತ್ರದಿಂದ ಸಂಪೂರ್ಣವಾಗಿ ವಂಚಿತಳಾಗಿದ್ದ ಮಹಿಳೆ ಈಗ ಸಮಾನವೇದಿಕೆ ಮೇಲೆ ಸಮಾವೇಶಗೊಂಡು ತನ್ನ ಅನುಭವಗಳನ್ನು ವಚನಮಾಧ್ಯಮದ ಮೂಲಕ ಸಮರ್ಥವಾಗಿ ಅಭಿವ್ಯಕ್ತಿ ಪಡಿಸಿ ಅವಕಾಶ ಕೊಟ್ಟರೆ ಸ್ತ್ರೀಯೂ ಎಂಥ ಉತ್ಕೃಷ್ಟ ಸಾಹಿತ್ಯ ಸೃಷ್ಟಿ ಮಾಡಬಲ್ಲಳು ಎಂಬುದನ್ನು ತೋರಿಸಿಕೊಟ್ಟಳು. ಹಿಂದೆಂದೂ ಕಾಣದ ಅಧಿಕ ಸಂಖ್ಯೆ ಮಹಿಳೆಯರು ಈ ಅವಧಿಯಲ್ಲಿ ವಚನ ರಚನೆ ಮಾಡಿ ಜಾಗತಿಕ ಸಾಹಿತ್ಯೇತಿಹಾಸದಲ್ಲಿಯೇ ಅಪೂರ್ವ ವೆನಸಿದ ಕೀರ್ತಿಗೆ ಭಾಜನರಾದರು ಅಂಥ ಕವಿಯತ್ರಿಯರ ಸಮಗ್ರ ರಚನೆಗಳನ್ನು ಒಳಗೊಂಡಿದೆ ಪ್ರಸ್ತುತ ವಚನ ಸಾಹಿತ್ಯ.

ಲಭ್ಯ ೩೩ ವಚನಕಾರ್ತಿಯರಲ್ಲಿ "ಪುಣ್ಯ ಸ್ತ್ರೀ" ವಿಶೇಷಣದೊಂದಿಗೆ ನಾಮಾಂಕಿತರಾಗಿರುವ ೧೪ ವಚನಕಾರ್ತಿಯರಿದ್ದು, ಇವರೆಲ್ಲರನ್ನು ಇವರ ಪತಿಯ ಹೆಸರುಗಳ ಮೂಲಕವೇ ಗುರುತಿಸಲಾಗಿದೆ. ನೀಲಾಂಬಿಕೆ, ಗಂಗಾಬಿಕೆ, ದುಗ್ಗಳೆ, ಮೋಳಿಗೆಯ ಮಹಾದೇವಿಯಮ್ಮ ಆಯ್ದಕಿ ಲಕ್ಕಮ್ಮ, ಮುಕ್ತಾಯಮ್ಮ, ಅಕ್ಕನಾಗಮ್ಮ, ಮುಂತಾದ ಉಳಿದ ವಿವಾಹಿತ ವಚನಕಾರ್ತಿಯರ ಸಂದರ್ಭದಲ್ಲಿ ಬಳಕೆಯಾಗದಿರುವ ಈ ವಿಶೇಷಣವು ಕೆಲವು ವಚನಕಾರ್ತಿಯರು ಹೆಸರುಗಳೊಂದಿಗೆ ಮಾತ್ರ ಕಂಡು ಬರುತ್ತಿರುವುದು ಕೂತೂಹಲದ ಸಂಗತಿ. ಪ್ರಾಚೀನ ವಚನ ಸಂಕಲನಗಳಲ್ಲಿ ಈ ವಿಶೇಷಣ ಸಹಿತವಾಗಿಯೇ ಗುರುತಿಸಲಾಗಿರುವ ಈ ಗುಂಪಿನ ವಚನಕಾರ್ತಯರು ಬಹುಶ: ಕೆಳವರ್ಗಕ್ಕೆ ಸಂಬಂಧಿಸಿದವರಾಗಿದ್ದು ಶರಣ ಚಳುವಳಿಯ ಪ್ರಭಾವದಿಂದ ಭಕ್ತೆಯರಾಗಿ, ಭಕ್ತರನ್ನು ಮದುವೆಯಾಗಿರುವ ಸಾಧ್ಯತೆಯಿದೆ, ತಮಗೆ ದೊರಕಿದ ಧಾರ್ಮಿಕ ಪ್ರವೇಶವನ್ನು ಅತ್ಯಂತ ಎಚ್ಚರಿಕೆ, ಉತ್ಸಾಹದಿಂದ ಕಾಪಾಡಿಕೊಳ್ಳುವ ದೃಡ ನಿಷ್ಠೆ, ಅವರ ವ್ರತಾಚಾರ ನಿಷ್ಠೆಯಲ್ಲಿ ವ್ಯಕ್ತವಾಗಿದೆ, ಕಾಯಕ ಜೀವಿಗಳಾಗಿರುವ ಬಹುತೇಕ ಪುಣ್ಯಸ್ತ್ರೀಯರ ವಚನಗಳಲ್ಲಿ ಅವರ ಸ್ವತಂತ್ರ ಮನೋದರ್ಮ, ಕಾಯಕಶ್ರದ್ಧೆ, ಲಿಂಗ ಜಾತಿ ಸಮಾನತೆ ಆಶ್ರಯ, ಏಕದೈವನಿಷ್ಠೆ ಪ್ರಖರವಾಗಿದೆ. ಉಳಿದ ವಿವಾಹಿತ ವಚನಕಾರ್ತಿಯರಂತೆ ತಮ್ಮ ಪತಿಯ ಹೆಸರುನ್ನು ವಚನಾಂಕಿತವಾಗಿರಿಸಿಕೊಂಡಿರುವುದು ಗಮನಿಸಬೇಕಾದ ಸಂಗತಿ. ಇವರಲ್ಲಿ ಬಹುಪಾಲು ವಚನಕಾರ್ತಿಯರು ತಮ್ಮ ತಮ್ಮ ಪತಿಯ ವೃತ್ತಿ ಮತ್ತು ಪ್ರವೃತ್ತಿಗೆ ಪೂರಕವಾಗಿ ಕುಲಕಸುಬುಗಳಲ್ಲಿ ತೊಡಗಿದಂತೆ ತೋರುತ್ತದೆ. ಉದಾಹರಣೆಗೆ ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ ಪತಿಯ ವೃತ್ತಿಯಾದ ಬಡಿಗತನವನ್ನು ತನ್ನ ಅನುಭುವ ವಿವೇಚನೆಗೆ ಬಳಸಿಕೊಂಡಿದ್ದಾಳೆ. ಅದೇ ರೀತಿ ಕುಂಬಾರ ವೃತ್ತಿಯ ಗುಂಡಯ್ಯನ ಪುಣ್ಯಸ್ತ್ರೀ.

ಕೇತಲದೇವಿ ಮಡಕೆ ಮಾಡುವ ಕಾಯಕವನ್ನು, ಕಾಟಕೂಟಯ್ಯಗಳ ಪುಣ್ಯಸ್ತ್ರೀ ರಾಚವ್ವೆ ಪಶುಪಾಲನೆಯ ವೃತ್ತಿ ಸೂಚನೆಯನ್ನು ತಮ್ಮ ವಚನಗಳಲ್ಲಿ ಪ್ರತಿಮಿಸಿದ್ದಾರೆ. ಲಿಂಗಮ್ಮನನ್ನು ಹೊರತುಪಡಿಸಿ ಉಳಿದವರು ಅನುಭಾವಿಕ ಚಿಂತನೆಗಳಿಗಿಂತಲೂ ನಡೆ ನುಡಿ ಶುದ್ಧಿ, ಸಮಾಜ ಶುದ್ಧೀಕರಣ, ಇತ್ಯಾಧಿ ಮಾನವೀಯ ಬದುಕಿನ ಸಂಗತಿಗಳಿಗೆ ಆಪ್ತವಾಗಿ ಸ್ಪಂದಿಸಿದ್ದಾರೆ.

ಕನ್ನಡ ಮಹಿಳಾ ಸಾಹಿತ್ಯದ ಮೊದಲ ಆಧ್ಯಯವನ್ನು ಪ್ರಾರಂಭಸಿದ ವಚನಕಾರ್ತಿಯರು, ತಮ್ಮ ಸಾಮಾಜಿಕ-ಸಾಂಸ್ಕೃತಿಕ ಅನುಭವ ವೈವಿಧ್ಯವನ್ನು ವಚನರೂಪಗಳಲ್ಲಿ ಅಭಿವ್ಯಕ್ತಿಸಿದರು, ಧರ್ಮ, ಸಮಾಜ, ಆಧ್ಯಾತ್ಮ ಅನುಭವಕ್ಕೆ ಸಂಬಂಧಿಸಿದ ತಮ್ಮ ವೈಯಕಿಕ ಅನಿಸಿಕೆಗಳನ್ನು ನಿರ್ಭಯವಾಗಿ ಪ್ರತಿಪಾದಿಸಿದರು. ವಚನ ಚಳುವಳಿಯ ವೈಚಾರಿಕ ಮತ್ತು ಆಧ್ಯಾತ್ಮಿಕ ಸತ್ವವನ್ನು ಆತ್ಮ ಶೋಧನೆ ಮತ್ತು ಸಾಮಾಜಕ ಶುದ್ಧೀಕರಣದ ಸೂತ್ರವಾಗಿಸಿಕೊಂಡ ಲಿಂಗಮ್ಮ, ಅಕ್ಕಮ್ಮ, ಮಹದೇವಮ್ಮ, ಕಾಳವ್ವೆ, ಸತ್ಯಕ್ಕೆ, ರಾಯಮ್ಮನವರು ವ್ಯಕ್ತಪಡಿಸಿದ ಉತ್ಕಟ ಧರ್ಮಶ್ರದ್ಧೆ, ತತ್ವನಿಷ್ಠೆ: ಋಜುಜೀವನದ ಕಾಳಜಿ, ಮುಕ್ತಾಯಕ್ಕ, ಮಹಾದೇವಿಯಕ್ಕ, ಬೋಂತಾದೇವಿ, ನೀಲಾಂಬಿಕೆ ಮುಂತಾದವರ ಅನುಭಾವಿಕ ಚಿಂತನೆಗಳು ಸ್ತ್ರೀ ಸತ್ವಕ್ಕೆ ಹೊಸ ಭಾಷ್ಯವನ್ನು ದೊರಕಿಸಿಕೊಟ್ಟವು, ಮಾಯೆ, ರಾಕ್ಷಸಿ ಎನ್ನುವ ಸ್ತ್ರೀ ಪ್ರತೀಕಗಳು ಮುರಿದು ಬಿದ್ದು, "ಹೆಣ್ಣು-ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲ ಸಿದ್ಧ ಮಲ್ಲಿಕಾರ್ಜುನ" (ಸಿದ್ಧರಾಮ) ಎನ್ನುವ ಉನ್ನತ ಮನ್ನಣೆ ಪ್ರಾಪ್ತವಾಯಿತು. ಹೀಗೆ ಮಹಿಳೆಯ ವ್ಯಕ್ತಿ ವಿಶಿಷ್ಠತೆ ಮತ್ತು ಸ್ವಾಯತ್ತತೆಯನ್ನು ದಾಖಲಿಸುವ ಪ್ರಥಮ ಪ್ರಯತ್ನವೆನಿಸಿರುವ ವಚನ ಯುಗದಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡ ಒಟ್ಟು ೩೫ ವಚನಕಾರ್ತಿಯರ ೧೩೫೧ ವಚನಗಳು ಇವರೆಗೆ ಪ್ರಕಟವಾಗಿವೆ. ಇದರಲ್ಲಿ ೩೩ ಮಹಿಳೆಯರ ಹೆಸರು ಮತ್ತು ವಚನಗಳು ಲಭ್ಯವಿದ್ದರೆ, ಅಂಕಿತ ಸಾಮ್ಯತೆಯಿಂದ ಮಹಿಳೆಯರ ರಚನೆಗಳೆಂದು ಊಹಿಸಲಾಗಿರುವ ಎರಡು ವಚನಗಳು ಲಭ್ಯವಿದ್ದು, ವಚನ ಕರ್ತೃವಿನ ವಿವರಗಳು ತಿಳಿದು ಬಂದಿಲ್ಲ. ಪ್ರಸ್ತುತ ೩೫ ವಚನಕಾರ್ತಿಯರಲ್ಲಿ ಒಬ್ಬಳಾಗಿರವ 'ಗುಡ್ಡವ್ವೆ' (ಬತ್ತಲೇಶ್ವರನ ಪುಣ್ಯ ಸ್ತ್ರೀ) ಬಸವೊತ್ತರ ಯುಗದ ವಚನಕಾರ್ತಿ.

ಸಮಕಾಲೀನ ಸಮಾಜದ ಧಾರ್ಮಿಕ ಮತ್ತು ಸಾಮಾಜಿಕ ಓರೆಕೋರೆಗಳನ್ನು, ಮನುಷ್ಯ ಸ್ವಭಾವದ ಕ್ಷುದ್ರತೆಯನ್ನು ಮುಕ್ತವಾಗಿ ವಿಶ್ಲೇಷಿಸುವ ಅಕ್ಕಮ್ಮ, ಅಮುಗೆ ರಾಯಮ್ಮ, ಕಾಳವ್ವೆ, ರೆಮ್ಮವ್ವೆ, ಸತ್ಯಕ್ಕ ಮುಂತಾದ ಸಾಮಾನ್ಯ ವರ್ಗದ ಮಹಿಳೆಯರು ತಮ್ಮ ವ್ರತಾಚಾರ ನಿಷ್ಠೆ, ಕಾಯಕ ಶ್ರದ್ಧೆ, ಸಮಾಜ ಶುದ್ಧೀಕರಣದ ಕಾಳಜಿಯುಳ್ಳ ವಿಚಾರ ಜೀವಿಗಳಾಗಿ ಪ್ರಸ್ತುತರಾಗಿದ್ದಾರೆ. ಹೀಗೆ ಶಾಬ್ದೀಕ ಸೃಷ್ಟಿ ಕ್ರೀಯೆಗಳಿಗೆ ತಮ್ಮ ಸೃಜನಶೀಲತೆಯನ್ನು ಸಿಮಿತಗೊಳಿಸಿಕೊಳ್ಳದೆ, ವಚನ ಚಳುವಳಿಯ ಕ್ರೀಯಾತ್ಮಕ ಭಾಗವಾಗಿ, ವಾಸ್ತವ ಬದುಕಿನ ಸತ್ಯ ಮತ್ತು ಸಂದಿಗ್ದತೆಗಳೊಂದಿಗೆ ಸ್ಪಂದಿಸುತ್ತಲೇ ನಡೆ-ನುಡಿ ಒಂದಾದ ಸಾಮರಸ್ಯದ ಬದುಕಿಗಾಗಿ ಹಂಬಲಿಸಿದ್ದಾರೆ.

ಹೀಗೆ ಚಳುವಳಿಯ ವೈಚಾರಿಕ ಮತ್ತು ಆಧ್ಯಾತ್ಮಿಕ ಸಂಸರ್ಗದಲ್ಲಿ ಭಕ್ತಿ ಮಾರ್ಗದ ಸಾದಕಿಯರಾಗಿ, ಚಿಂತನಶೀಲರಾಗಿ ಶ್ರೇಷ್ಠ ಅನುಭಾವಿಗಳಾಗಿ ಹೊರಹೊಮ್ಮಿದ ಮಹಿಳೆಯರು ಕನ್ನಡ ಮಹಿಳಾ ಸಾಹಿತ್ಯ ಮತ್ತು ಸಂಸ್ಕೃತಿಗೆ ಸತ್ವಪೂರ್ಣ ಪರಂಪರೆಯನ್ನು ನಿರ್ಮಿಸಿದರು. ಮಧುರ ಭಕ್ತಿ ಸಾಧಕಳಾದ ಮಹಾದೇವಿಯಕ್ಕ ಸ್ತ್ರೀ ವಿರೋದಿ ವಾಸ್ತವದ ವೈರುದ್ಯಗಳೊಂದಿಗೆ ಮುಖಾಮುಖಿಯಾಗುತ್ತಲೇ, ಲೋಕೋತ್ತರವಾಗಿ ಬೆಳೆದ ಅಪ್ರತಿಮ ಸಾಧಕಿ. ಶ್ರೇಷ್ಠ ಅನುಭಾವಿಯಾಗಿ.

"ಹೆಣ್ಣಿನ ಗೌರವ ಸಾಧನೆಯ, ಹೆಣ್ಣಿನ ಸ್ವಾತಂತ್ರ್ಯ ಸಾಧನೆಯ, ಹೆಣ್ಣಿನ ಪಾರಮಾರ್ಥ ಸಾಧನೆಯ ಒಂದು ಮಹಾಪ್ರಕರಣ"ವಾಗಿ ಇತಿಹಾಸವನ್ನು ನಿರ್ಮಿಸಿದ್ದಾಳೆ. ಮುಕ್ತಾಯಕ್ಕ ಶ್ರೇಷ್ಠ ಮಟ್ಟದ ತತ್ವಜ್ಞಾನಿಯಾಗಿ ತನ್ನ ಬೌದ್ಧಿಕ ಪ್ರೌಢಿಮೆ, ಆಧ್ಯಾತ್ಮಿಕ ಜಿಜ್ಞಾಸೆ, ಅನುಭಾವದ ಸೂಕ್ಷ್ಮತೆಯಿಂದ ಅಪೂರ್ವ ಅನುಭಾವಿಯಾಗಿದ್ದಾಳೆ.

ಒಟ್ಟಾರೆ ಶತಮಾನಗಳ ಬೌದ್ಧಿಕ-ಮಾನಸಿಕ ದಾಸ್ಯದಲ್ಲಿ ತಮ್ಮ ಸವಾತಂತ್ರ್ಯ ಸ್ವಂತಿಕೆ ಮತ್ತು ಸ್ವಾಭಾವ್ಯಕ್ತಿಯನ್ನು ಕಳೆದುಕೊಂಡಿದ್ದ ಸ್ತ್ರೀ ಸಮಾಜವು ಮೊದಲ ಭಾರಿಗೆ ತಮ್ಮ ಆಯ್ಕೆ ಆದ್ಯತೆಗಳ ಬಗೆಗೆ ಯೋಚಿಸಿದುದು ವಿಶೇಷ ಸಂಗತಿ. ಶೋಷಿತ ಸಮುದಾಯದಲ್ಲಿ ಆತ್ಮ ಜಾಗೃತಿಯನ್ನು ಮೂಡಿಸಿ, ಆತ್ಮ ಸನ್ಮಾನವನ್ನು ಎಚ್ಚರಿಸಿದ ಶರಣ ಚಳುವಳಿಯು ಜನಸಾಮಾನ್ಯರ ಉದ್ದಾರಕ್ಕಾಗಿ ಜನಸಾಮಾನ್ಯರಿಂದಲೆ ನಡೆದ ಜನಪರ ಹೋರಾಟ. "ನಿಜವಾದ ಅರ್ಥದ ಪೂರ್ಣ ಪ್ರಮಾಣದ ಸಾಮಾಜಿಕ ಚಳುವಳಿ ನಡೆದುದು ಅದೇ ಮೊದಲು".

**ಅಲ್ಲಯ್ಯಗಳ ವಚನ ಎರಡೆಂಬತ್ತು ಕೋಟಿ**
**ಅಪ್ಪಯ್ಯಗಳ ವಚನ ನಾಲ್ಕು ಲಕ್ಷದ ಮೂವತ್ತಾರು ಸಾಸಿರ**
**ಎಮ್ಮಯ್ಯಗಳ ವಚನ ವಚನಕ್ಕೊಂದು**
**ನೀಲಮ್ಮನ ವಚನ ಲಕ್ಷದ ಹನ್ನೊಂದು ಸಾಸಿರ**
**ಗಂಗಾಬಿಕೆಯ ವಚನ ಲಕ್ಷದ ಎಂಟುಸಾಸಿರ**
**ಎಮ್ಮಕ್ಕ ನಾಗಾಯಿಗಳ ವಚನ ಮೂರು ಲಕ್ಷದ ತೊಂಬತ್ತಾರು ಸಾಸಿರ.**

ಸಿದ್ಧರಾಮ ಶಿವಯೋಗಿಗಳು ನೀಡುವ ವಚನಗಳ ಸಂಖ್ಯಾ ಪ್ರಮಾಣವಂತು ಬೇರಗು ಮೂಡಿಸುವಂತಿದೆ. ಮೇಲಿನ ವಚನವು ನೀಡುವ ಅಗಾಧ ಮೊತ್ತದ ಹಿನ್ನೆಲೆಯಲ್ಲಿ ಇಂದು ದೊರಕಿರುವ ವಚನಗಳು (ಸುಮಾರು ೨೧೦೦೦) ಸಮುದ್ರದಲ್ಲಿ ಸಾಸಿವೆಯಂತೆ ಬಾಸವಾದರು, ಮಹಳೆಯರು ಬಹುದೊಡ್ಡ ಪ್ರಮಾಣದಲ್ಲಿ ವಚನ ರಚನೆ ಮಾಡಿದರೆನ್ನುವುದು ಗಮನಿಸಬೇಕಾದ ಸಂಗತಿ. ಅಧಿಕೃತ ಆಕರಗಳ ಹಿನ್ನೆಲೆಯಲ್ಲಿ ಸಧ್ಯಕ್ಕೆ ಗುರುತಿಸಿರುವ ಸುಮಾರು ೨೬೮ ವಚನಕಾರರಲ್ಲಿ ೩೫ ವಚನಕಾರ್ತಿಯರಿದ್ದಾರೆ. ಶರಣ ಚಳುವಳಿಯ ಆಶೆಯಗಳೊಂದಿಗೆ ಕ್ರೀಯಾಶೀಲವಾಗಿ ಸ್ಪಂದಿಸಿದ ನೂರಾರು ಮಹಿಳೆಯರ ಉಲ್ಲೇಖಗಳು ವೀರಶೈವ ಕಾವ್ಯಗಳಲ್ಲಿ ದೊರಕುತ್ತಿರುವುದನ್ನು ಗಮನಿಸಿದರೆ, ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ವಚನ ರಚನೆಯಲ್ಲಿ ತೊಡಗಿಕೊಂಡಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಆದರೆ ವಚನ ಚಳುವಲಿಯ ಕೊನೆಗಾಲದಲ್ಲಿ ನಡೆದ ರಾಜಕೀಯ ವಿಪ್ಲವದ ಕಾರಣವಾಗಿ ಶರಣರ ಸಂಘಟನೆ ಚದುರಿದಾಗ ಅಪಾರ ಪ್ರಮಾಣದ ವಚನ ಸಾಹಿತ್ಯವು ಸೂಕ್ತ ರಕ್ಷಣೆಯಿಲ್ಲದೆ ನಾಶ ಹೊಂದಿತ್ತೇನ್ನುವುದು ತಿಳಿದ ಸಂಗತಿ. ಮುಂದಿನ ಶತಮಾನಗಳಲ್ಲಿ ಕಾಣಿಸಿಕೊಂಡ ಮತೀಯ ಪೈಪೋಟಿಗಳು, ಸಾಮಾಜಿಕ ವಿಸ್ಮೃತಿ, ಅನುಯಾಯಿಗಳ ಅಜ್ಞಾನ, ಅವಜ್ಞಾನ ಇತ್ಯಾದಿ ಕಾರಣಗಳಿಂದ ಬದುಕಿನಿಂದ ದೂರವಾದ ವಚನ ಸಾಹಿತ್ಯದ ದೊಡ್ಡ ಭಾಗವು ನಾಶವಾಗಿದ್ದರೂ, ಲಭ್ಯವಿರುವ ವಚನ ಸಾಹಿತ್ಯವು ಚಳುವಳಿಯ ಸಾಂಸ್ಕೃತಿಕ ಸಂದರ್ಭವನ್ನು ಲೌಕಿಕ ಪಾರಲೌಕಿಕ ಆದರ್ಶಗಳನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸುವ ಮೌಲಿಕ ಆಕರವಾಗಿದೆ.

ಶರಣ ಚಳುವಳಿಯ ಉದಾತ್ತ ಮಾನವಿಯ ಚಿಂತನೆಗಳಿಗೆ ಆಕರ್ಷಿತರಾದ ಮಹಿಳೆಯರು ಸಾಮೂದಾಯಿಕವಾಗಿ ವಚನ ರಚನೆಯಲ್ಲಿ ತೊಡಗಿಸಿಕೊಂಡರೆನ್ನುವುದು ಐತಿಹಾಸಿಕ ಸಂಗತಿ. ವಚನ, ಸ್ವರವಚನ, ಕಾಲಜ್ಞಾನ, ತ್ರಿವಿದಿ ಇತ್ಯಾದಿ ಸಾಹಿತ್ಯ ಪ್ರಕಾರಗಳಲ್ಲಿ ತಮ್ಮ ಅನುಭಾವಿಕ ಚಿಂತನೆಗಳನ್ನು, ಸಾಮಾಜಿಕ ಸಂವೇದಗಳನ್ನು ಅತುತ್ಸಾಹದಿಂದ ಬಹರ ರೂಪಕ್ಕಿಳದ ಸ್ತ್ರೀ ಸಮಾಜವು ಬಸವೊತ್ತರ ಯುಗದಲ್ಲಿ ಸಾಹಿತ್ಯ ಪ್ರಪಂಚದಿಂದ ಅದೃಶ್ಯವಾದದ್ದು ಕುತೂಹಲಕಾರಿಯಾಗಿದೆ. ಚಳುವಳಿಯ ದುರಂತ ಅಂತ್ಯವು ಶರಣರ ಪ್ರಗತಿಪರ ಆಶಯುಗಳಿಗೆ ಮತ್ತು ವಚನ ರಚನೆಯ ಪ್ರಕ್ರೀಯೆಗೆ ಹಿನ್ನಡೆ ಉಂಟು ಮಾಡಿದ್ದರೂ, ಮುಂದಿನ ಶತಮಾನಗಳಲ್ಲಿ ವಚನ ರಚನೆಯ ಪ್ರಯತ್ನಗಳು ವಿರಳವಾಗಿಯಾದರೂ ನಡೆದುದಕ್ಕೆ ಬಸವೋತ್ತರ ಯುಗದ ವಚನ ಸಾಹಿತ್ಯ ನಿದರ್ಶನವಾಗಿದೆ. ಕ್ರಿ.ಶ. ೧೩ ನೇ ಶತಮಾನದಿಂದ ೧೮ನೇಯ ಶತಮಾನದವರೆಗಿನ ವೀರಶೈವ ಕಾವ್ಯಗಳಲ್ಲಿ ಶರಣರ ವ್ಯಕ್ತಿತ್ವ ಮತ್ತು ಸಾಧನೆಗಳು ಮರು ವ್ಯಾಖ್ಯಾನಗಳಿಗೆ ಒಳಪಡುತ್ತಾ ಜನ ಜೀವನವನ್ನು ಪ್ರವೇಶಿಸಿವೆ. ೧೫–೧೬ ನೇಯ ವಿರಕ್ತ ಪರಂಪರೆಯ ಸಾಮೂಹಿಕ ಪ್ರಯತ್ನಗಳು ವಚನ ಸಾಹಿತ್ಯದ ಪುನರ್ ಜೀವನಕ್ಕೆ ಶಕ್ತಿ ತುಂಬಿವೆ. ಹೀಗೆ ಬಸವೋತ್ತರ ಯುಗದಲ್ಲಿ ವೈಯಕ್ತಿಕ ಮತ್ತು ಸಾಮೂಹಿಕ ನೆಲೆಯಲ್ಲಿ ವಚನ ರಚನೆ ನಡೆದು ಬಂದಿದ್ದನ್ನು ಸದ್ಯಕ್ಕೆ ದೊರಕಿರುವ ಬಸವೋತ್ತರ ಯುಗದ ೩೫ ವಚನಕಾರರ ೬೭೬೪ ವಚನಗಳು ಬೆಂಬಲಿಸುತ್ತವೆ. ಆದರೆ ಬಸವೋತ್ತರ ಯುಗದಲ್ಲಿ ಗುಡ್ಡವ್ವೆ (ಕ್ರಿ.ಶ. ೧೪೫೦) ಎಕಮಾತ್ರ ವಚನಕಾರ್ತಿಯಾಗಿ ಕಾಣಿಸಿಕೊಳ್ಳುವುದು ಸೋಜಿಗವೆನ್ನಿಸುತ್ತದೆ. ಮಹಿಳೆಯರಿಗೆ ಧಾರ್ಮಿಕ, ಸಾಮಾಜಿಕ ಅವಕಾಶಗಳನ್ನು ಮುಕ್ತಗೊಳಿಸಿ, ಅವರ ಸಾಹಿತ್ಯ ಪ್ರತಿಭೆ ಮತ್ತು ಸೃಜನಶೀಲತೆಯನ್ನು ಪ್ರೋತ್ಸಾಹಿಸಿದ ಸ್ತ್ರೀ ಪರ ಆಶಯಗಳು ಮುಂದಿನ ಶತಮಾನದಲ್ಲಿ ಸಂಪೂರ್ಣವಾಗಿ ಸ್ಥಗಿತಗೊಳ್ಳಲಿಲ್ಲವೆನ್ನುವುದಕ್ಕೆ ಬಸವ ಪುರಾಣ, ಶಿವತತ್ವ ಚಿಂತಾಮಣಿ, ಗುರುರಾಜ ಚಾರಿತ್ರ್ಯ, ಭೈರವೇಶ್ವರ ಕಾವ್ಯ, ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ ಮುಂತಾದ ಗ್ರಂಥಗಳು ನೀಡುವ ಸ್ತ್ರೀ ಸಮಾಜದ ವಿವರಗಳು ಮಹತ್ವದ ಸಾಮಗ್ರಿಗಳುವೆನಿಸುತ್ತವೆ.

ಧರ್ಮತತ್ವ ಗೋಷ್ಠಿಗಳಲ್ಲಿ ಧಾರ್ಮಿಕ ಆಚರಣೆ, ಧಾರ್ಮಿಕ ಸಾಹಿತ್ಯ ವಾಚನ, ಧರ್ಮತತ್ವ ಪ್ರಸಾರದ ಬೌದ್ಧಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡು, ಕಾಯಕ ಜೀವಿಗಳಾಗಿ ಮನ್ನಣೆ ಪಡೆದ ನೂರಾರು ಮಹಿಳೆಯರ ಉಲ್ಲೇಖಗಳು ಸೃಜನಶೀಲ ಪ್ರಪಂಚದಿಂದ ಮಹಿಳೆಯರು ದೂರವಾಗಿ ಉಳಯಲಿಲ್ಲವೆನ್ನುವುದು ಸೂಚಿಸುತ್ತವೆ. ೧೪–೧೫ನೇ

ಶತಮಾನಗಳಲ್ಲಿ ಬಸವಾದಿ ಶರಣರ ಲಭ್ಯ ವಚನಗಳನ್ನು ವಿವಿಧ ಉದ್ದೇಶಗಳಿಗನುಗುಣವಾಗಿ ವ್ಯವಸ್ಥೆಗೊಳಿಸುವ ಹೊಸಹೊಸ ಪ್ರಯೋಗಗಳು ನಡೆದವು. ಪರಿಣಾಮವಾಗಿ ವಚನ ಸಾಹಿತ್ಯದ ಅಮೂಲ್ಯ ನಿಧಿಯು ಕೆಳಮಟ್ಟಿಗೆ ಉಳಿದುಕೊಂಡಿತ್ತೇನುವುದು ನಿಜವಾದರೂ ನಿರ್ದಿಷ್ಟ ಸೈದ್ಧಾಂತಿಕ ಮತ್ತು ತಾತ್ವಿಕ ಚೌಕಟ್ಟನ್ನು ಗುರಿಯಾಗಿಸಿಕೊಂಡು ನಡೆದಿರುವ ಇಂತಹ ಪ್ರಯತ್ನಗಳಿಂದ ಸಂಕಲನಕಾರರ ಆಯ್ಕೆ ಮತ್ತು ಉದ್ದೇಶಕ್ಕೆ ಹೊರತಾದ ವಚನಗಳು ದಾಖಲೀಕರಣದ ಪ್ರಕ್ರಿಯೆಯಿಂದ ಹೊರಗುಳಿದು ಕ್ರಮೇಣ ನಾಶವಾಗಿರುವ ಸಾಧ್ಯತೆಯನ್ನು ಅಲ್ಲಗೆಳೆಯಲಾಗುವುದು. ಅಂತೆಯೇ ಸದ್ಯಕ್ಕೆ ಕೇವಲ ೩೩ ವಚನಕಾರ್ತಿಯರ ರಚನೆಗಳು ದೊರಕಿದ್ದರೂ ಕಾಲದ ಪ್ರವಾಹ ಮತ್ತು ವಿಸ್ಮೃತಿಯ ಕತ್ತಲೆಯಲ್ಲಿ ಕಳೆದು ಹೋದವರ ಸಂಖ್ಯೆಯು ದೊಡ್ಡದಾಗಿರುವಂತೆ ತೋರುತ್ತದೆ.

## ಆಧಾರ ಗ್ರಂಥಗಳು

ಕನ್ನಡ ಸಾಹಿತ್ಯ ಚರಿತ್ರೆ – ರಂ. ಶ್ರೀ. ಮುಗಳಿ.

ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ – ಡಾ॥ ಹೆಚ್. ಎಸ್. ಶ್ರೀಮತಿ.

ಸಾಮಾನ್ಯನಿಗೆ ಕನ್ನಡ ಸಾಹಿತ್ಯ ಚರಿತ್ರೆ – ಬೆಂಗಳೂರು ವಿಶ್ವವಿದ್ಯಾಲಯ